(ಮಾನ್ಯ ಸದಸ್ಯರಾದ ಶ್ರೀ ಪ್ರತಾಪಚಂದ್ರ ಶೆಟ್ಟಿಯವರು ಸಭಾಧ್ಯಕ್ಷ ಪೀಠದ ಮುಂಭಾಗದಲ್ಲಿರುವ ಬಾವಿಯನ್ನು ಧರಣಿ ಕುಳಿತರು.)

ಶ್ರೀ ಬಸವರಾಜ ರಾಯರೆಡ್ಡಿ : (ವಸತಿ ಸಚಿವರು): ಮಾನ್ಯ ಅಧ್ಯಕ್ಷರೆ, ಅವರು ಧರಣಿ ಕುಳಿತಿದ್ದರಿಂದ ನಾವು ಉತ್ತರ ಹೇಳುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು : ಹೇಳಬಹುದು.

1.20 ಪಿ.ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಮೊನ್ನೆ ಈ ವಿಷಯ ಸ್ಪೀಕರ್ ಛೇಂಬರನಲ್ಲಿ ಚರ್ಚೆಗೆ ಬಂತು. ಮಾನ್ಯ ಮುಖ್ಯಮಂತ್ರಿಗಳು ಕೂಡ ಹೇಳಿದರು. ನಾನು ಹೋಮ್ ಮಿನಿಸ್ಟರ್ ಜೊತೆಯಲ್ಲಿ ಚರ್ಚೆ ಮಾಡಿ ಇದರ ಬಗ್ಗೆ ಯಾವ ತೀರ್ಮಾನವನ್ನು ತೆಗೆದುಕೊಳ್ಳಬೇಕೋ ಅದನ್ನು ಮಾಡೋಣ. ಆ ವಿಷಯವನ್ನು ಸಿಬಿಐ ಎನಕ್ವೋಯರಿಗೆ ಕಳುಹಿಸಬೇಕಾದರೆ ಹೇಗೆ ಮಾಡಬೇಕು ಎನು ಮಾಡಬೇಕು ಅದನ್ನು ನಾನು ಚರ್ಚೆ ಮಾಡಿ ಮಾಡುತ್ತೇನೆಂದು ಹೇಳಿದ್ದರು. ಈಗ ಹೋಮಮಿನಿಸ್ಟರ್ ಇಲ್ಲೇ ಇದ್ದಾರೆ. ಮುಖ್ಯಮಂತ್ರಿಗಳು ಕೂಡ ಇದ್ದಾರೆ.

ಉಪಾಧ್ಯಕ್ಷರು : ಮಾನ್ಯ ಸದಸ್ಯರು ಒಂದು ನಿಮಿಷ, ನಾನು ತಮಗೆ ಕೇಳುತ್ತಿದ್ದೇನೆ. ಅವರು ಕೇಳತಕ್ಕದ್ದು ಬೇಡ ಎನ್ನುವುದಿಲ್ಲ. ಎರಡೆರಡು ವಿಷಯ ಪ್ರಸ್ತಾಪ ಮಾಡತಕ್ಕದ್ದು ಒಂದು ಈಗ ಮಾನ್ಯ ಪ್ರತಾಪಚಂದ್ರಶೆಟ್ಟಿಯವರು ಪ್ರತಿಭಟನೆ ಮಾಡತಕ್ಕದ್ದು ಸ್ಪೀಕರ್ ವಿರುದ್ಧವೋ ಅಥವಾ ಸರ್ಕಾರದ ವಿರುದ್ಧವೋ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾವುದಕ್ಕೆ ?

ಉಪಾಧ್ಯಕ್ಷರು : ಸ್ಪೀಕರ್ ಹೇಳಿದ್ದರು ಎನ್ನತಕ್ಕದ್ದನ್ನು ಹೇಳಿ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ಪೀಕರ್ ಛೇಂಬರನಲ್ಲಿ ಹೇಳಿದ್ದರು ಅಂದು; ಅವರು ಸ್ಪೀಕರ್ ವಿರುದ್ಧ ಏತಕ್ಕೆ ಮಾಡುತ್ತಾರೆ ? ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ ತಮಗೇನೂ ತೊಂದರೆಯಾಗುವುದಿಲ್ಲ.

ಉಪಾಧ್ಯಕ್ಷರು : ಮಾನ್ಯ ಪ್ರತಾಪಚಂದ್ರಶೆಟ್ಟಿಯವರೇ, ತಾವು ತಮ್ಮ ಪೀಠಕ್ಕೆ ಹೋಗಿ.

ಶ್ರೀ ಹೆಚ್. ಡಿ. ದೇವೇಗೌಡ : ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಮಾನ್ಯ ಖರ್ಗೆಯವರು ನಾನು ಅವರೆಲ್ಲಾ ಸೇರಿ ಸ್ಪೀಕರ್ ಕೊಠಡಿಯೊಳಗೆ ಮಾತನಾಡಿದ್ದೇವೆ. ನಮ್ಮ ಮುಂದಿರತಕ್ಕ ಸಮಸ್ಯೆ ಒಂದೇ, ಚಾರ್ಜಶೀಟ್ ಕೊಟ್ಟಿದ್ದಾರೆ. ಇದರ ವಿಷಯ ಪೂರ್ವಾಪರ ಮಾಹಿತಿ ತಿಳಿದು ಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದು ಈ ವಿಷಯದ ಮೇಲೆ ಚಾರ್ಜ್‌ಶೀಟ್ ಯಾವಾಗ ಕೊಟ್ಟರು ಎಂಬುದು ನನಗೆ ಗೊತ್ತಿಲ್ಲ; ಅದನ್ನು ಆಮೇಲೆ ಹೇಳುತ್ತೇನೆ. ಶ್ರೀಮಾನ್ ಡಿ.ಕೆ. ನಾಯ್ಕರ್‌ರವರು ನನಗೂ ಫೋನ್ ಮಾಡಿ ಇದನ್ನು ಸಿಬಿಐ ಎನ್‌ಕ್ವೆಯರಿಗೆ ಕಳುಹಿಸಬೇಕೆಂದು ಒಂದು ಹಂತದಲ್ಲಿ ಹೇಳಿದರು. ಶ್ರೀಮಾನ್